ಓ ಎಸ್ ನಂ.109/2023
ಡಿ.ಡಬ್ಲ್ಯೂ-1 ಉಮಾದೇವಿ ಗಂಡ ಬಸವಂತಯ್ಯ ಮಠದ

**(ಇಂದು ದಿನಾಂಕಃ 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಖ್ಯ ವಿಚಾರಣೆಃ ಶ್ರೀಮತಿ ಎ ಟಿ ಡಿ ವಕೀಲರಿಂದ.

ನಾನು ದಿನಾಂಕ 04-03-2008 ರ ಸಿದ್ದರಾಮರವರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೨ ಎಂದು ಗುರುತಿಸಲಾಯಿತು.

ನಾನು ದಿನಾಂಕ 04-03-2008 ರ ಶ್ರೀಶೈಲರವರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೩ ಎಂದು ಗುರುತಿಸಲಾಯಿತು.

ನಾನು ದಿನಾಂಕ 23-03-2009 ರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೪ ಎಂದು ಗುರುತಿಸಲಾಯಿತು.

ನಾನು ದಿನಾಂಕ 26-06-2009 ರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೫ ಎಂದು ಗುರುತಿಸಲಾಯಿತು.

ನಾನು ದಿನಾಂಕ 26-06-2009 ರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೬ ಎಂದು ಗುರುತಿಸಲಾಯಿತು.

ನಾನು ದಿನಾಂಕ 28-11-2011 ರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೭ ಎಂದು ಗುರುತಿಸಲಾಯಿತು.

ನಾನು ದಿನಾಂಕ 18-11-2010 ರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೮ ಎಂದು ಗುರುತಿಸಲಾಯಿತು.

ನಾನು ದಿನಾಂಕ 04-05-2012 ರ ಖರೀದಿ ಪತ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೯ ಎಂದು ಗುರುತಿಸಲಾಯಿತು.

ನಾನು ಓ ಎಸ್ ನಂಬರ 126-20189 ರ ಆದೇಶ ಪುಟ ಮತ್ತು ವಾದಪತ್ರದ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ-೧೦ ಮತ್ತು ನಿಡಿ-೧೧ ಎಂದು ಗುರುತಿಸಲಾಯಿತು.

ನಾನು ತಹಶೀಲ್ದಾರರವರ ಆದೇಶ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೧೨ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಜಿ ಪಿ ವಕೀಲರಿಂದ.

ನಾವು ೪ ಜನ ಸಹೋದರಿಯರು ಮತ್ತು ೩ ಜನ ಸಹೋದರರು ಇರುತ್ತೇವೆ. ದಾವಾ ಆಸ್ತಿ ಹಿರಿಯರಿಂದ ಬಂದಿದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಯಾವುದೆ ಪಾಲುವಾಟ್ನಿ ಆಗದೆ ಉಳಿದ ಆಸ್ತಿ ಆಗಿದೆ ಎಂದರೆ ಸರಿ. ಸಾಕ್ಷಿಯು ನಂತರ ಪಾಲು ಆಗಿದೆ ಎನ್ನುತ್ತಾರೆ. ದಾವಾ ಆಸ್ತಿಯ ಸರ್ವೆ ನಂಬರ ನನಗೆ ಹೇಳಲು ಆಗುವುದಿಲ್ಲ. ಮೊದಲು ೩೪ ಎಕರೆ ಜಮೀನು ನಮಗೆ ಇತ್ತು. ಅದರಲ್ಲಿ ೧೩ ಎಕರೆ ಚಿದಾನಂದರವರಿಗೆ ಮತ್ತು ೧೩ ಎಕರೆ ಸದಾನಂದರವರಿಗೆ ನೀಡಲಾಗಿರುತ್ತದೆ. ಉಳಿದ ೮ ಎಕರೆ ನಮ್ಮ ತಾಯಿ ಇಟ್ಟುಕೊಂಡು, ಅದನ್ನು ೪ ಜನ ಹೆಣ್ಣುಮಕ್ಕಳಿಗೆ ತಲಾ ೨ ಎಕರೆಯಂತೆ ನಮಗೆ ನೀಡಿರುತ್ತಾರೆ.

೨. ನಮ್ಮ ತಾಯಿ ಸುಮಾರು ೩-೪ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನಮ್ಮ ತಾಯಿ ಮೃತರಾಗುವ ಮೊದಲು ಕೂಡು-ಕುಟುಂಬ ಇತ್ತು ಎಂದರೆ ಸರಿ.

[ ಈ ಹಂತದಲ್ಲಿ ೫ ರಿಂದ ೮ನೇ ಪ್ರತಿವಾದಿ ಪರ ವಕೀಲರು ೧ನೇ ಪ್ರತಿವಾದಿ ಕೂಡಾ ನ್ಯಾಯಾಲಯದಲ್ಲಿ ಈ ದಿನ ಬಂದು ಕುಳಿತಿರುತ್ತಾರೆ ಎಂದು ಹೇಳಿತ್ತಾರೆ. ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಅವರು ೧ನೇ ಪ್ರತಿವಾದಿ ಇರುವುದು ಕಂಡುಬಂದಿರುತ್ತದೆ. ]

ನಮ್ಮ ೪ ಜನ ಹೆಣ್ಣುಮಕ್ಕಳ ಮದುವೆಗೆ ಆದ ಸಾಲವನ್ನು ತೀರಿಸಲು ೧ನೇ ಪ್ರತಿವಾದಿ ಚಿದಾನಂದ ತಮ್ಮ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಹೋದರರಲ್ಲಿ ಸದಾನಂದ ಮತ್ತು ಶಿವಾನಂದರವರು ಮೃತರಾಗಿರುತ್ತಾರೆ. ನಮ್ಮ ತಾಯಿ ತಮ್ಮ ಜಮೀನನ್ನು ಗಂಡು ಮಕ್ಕಳಿಗೆ ಬಿಟ್ಟುಕೊಡಿ ಎಂದು ಹೇಳಿದ್ದರು ಎಂದರೆ ಸಾಕ್ಷಿಯು ಸದರಿ ಜಮೀನನ್ನು ಕೂಡಾ ಗಂಡು ಮಕ್ಕಳು ಮಾರಾಟ ಮಾಡುತ್ತಾರೆ ಎಂದು ನಮ್ಮ ತಾಯಿ ನಮ್ಮ ೪ ಜನ ಹೆಣ್ಣುಮಕ್ಕಳಿಗೆ ಜಮೀನು ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ನಮ್ಮ ತಾಯಿ ನಮ್ಮ ಹೆಸರಿಗೆ ಯಾವುದೆ ದಾಖಲೆ ಮಾಡಿಕೊಟ್ಟಿಲ್ಲ ಅದನ್ನು ನಾವೆ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಾಯಿ ತಹಶೀಲ್ದಾರ ಕಛೇರಿಗೆ ಬಂದು ದಾಖಲೆ ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ಸಾಕ್ಷಿಯು ೧ನೇ ಪ್ರತಿವಾದಿ ಕೂಡಾ ಆ ಸಮಯದಲ್ಲಿ ಹಾಜರಿದ್ದ ಮತ್ತು ಸದಾನಂದನ ಹೆಂಡತಿಯಾದ ೬ನೇ ಪ್ರತಿವಾದಿ ಕೂಡಾ ಹಾಜರಿದ್ದರು ಎನ್ನುತ್ತಾರೆ. ನನ್ನ ತಮ್ಮ ಶಿವಾನಂದನ ಮದುವೆ ಆಗಿರಲಿಲ್ಲ. ೧ ಮತ್ತು ೬ನೇ ಪ್ರತಿವಾದಿಗಳು ಕೂಡಾ ಒಪ್ಪಿಗೆ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಮ್ಮ ತಾಯಿ ಅವರ ಒಪ್ಪಿಗೆ ಪಡೆಯದೆ ನಮಗೆ ದಾಖಲೆ ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ.

೩. ೧ ಮತ್ತು ೯ನೇ ಪ್ರತಿವಾದಿಗಳ ಒಪ್ಪಿಗೆ ಪಡೆಯದೆ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಾಯಿ ಮೃತ್ಯುಪತ್ರ ಮಾಡಿರುತ್ತಾರೆ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.